

ಜಾಲಾಡಿದರೂ ಸಿಗದೇ ಸುಸ್ತಾದ ಅವರು ಬೆಳಗ್ಗೆ ವಾಲೀಕಾರನಿಗೆ ಅವರ ಸುಳಿವು ಸಿಕ್ಕರೆ ವರದಿ ಮಾಡುವಂತೆ ತಿಳಿಸಿ ಹೊರಟುಹೋದರು. ಆದರೆ, ಮೂವರು ಊರ ಅಗಸಿ ಮುಂದೆ ಇದ್ದಾರೆನ್ನುವ ವಿಷಯ ಯಾರಿಗೂ ಗೊತ್ತಾಗಲಿಲ್ಲ. ಪೊಲೀಸರ ಸುದ್ದಿ ಕೇಳಿ ಪರಪ್ಪ ಮತ್ತು ಆತನ ಸಹಚರರು ಇಡೀ ರಾತ್ರಿ ಆ ಆಲದ ಮರದ ರೆಂಬೆಯಲ್ಲಿ ನಿದ್ರೆಯಿಲ್ಲದೆ ನಿಶ್ಯಬ್ದವಾಗಿ ಕೂತು ಕಳೆದಿದ್ದರು. ಅಂದು ಆ ಮರ ಆ ಮೂವರ ಪ್ರಾಣವನ್ನು ರಕ್ಷಿಸಿತ್ತು.

ಮುಂದೆ ಹಲವಾರು ವರ್ಷಗಳು ಸರಕಾರಿ ಕಂದಾಯ ವಸೂಲಿ ಆರಂಭವಾಗುತ್ತಲೆ ಗ್ರಾಮದ ಲೆಕ್ಕಪತ್ರ ಸುಡುವುದು, ವಸೂಲಾದ ಕಂದಾಯದ ಹಣ ಲೂಟಿ ಮಾಡಿ ಬಡವರಿಗೆ ಹಂಚುವುದು ಮಾಡಿದ ಪರಪ್ಪನ ತಂಡದಿಂದಾಗಿ, ಬಂದೂಕುಧಾರಿ ಪೊಲೀಸರ ಕಾವಲಿನಲ್ಲಿ ಕಂದಾಯ ವಸೂಲಿ ಮಾಡುವ ಏರ್ಪಾಟು ಮಾಡಬೇಕಾಯಿತು. ಒಮ್ಮೆ ಪರಪ್ಪನ ನೇತೃತ್ವದ ತಂಡ ಪೊಲೀಸರ ಮೇಲೆ ಎರಗಿ ಅವರ ಪಿಸ್ತೂಲು, ಸಮವಸ್ತ್ರ, ಟೈಪ್‌ರೈಟರ್ ತೆಗೆದುಕೊಂಡು, ಕಾಗದ ಪತ್ರಗಳನ್ನು ಸುಡುತ್ತಿತ್ತು. ಮರೆಯಲ್ಲಿ ಕುಳಿತಿದ್ದ ಫೌಜುದಾರನೊಬ್ಬ ಹಾರಿಸಿದ ಗುಂಡು ಪರಪ್ಪನ ಎಡತೋಳು ಸೇರಿತ್ತು. ಅವರನ್ನೆಲ್ಲ ಬಂಧಿಸಿದ ಪೊಲೀಸರು ನಿಟ್ಟುಸಿರುಬಿಟ್ಟರು. ಆ ವೇಳೆ ಜೈಲು ಸೇರಿದ ಎಲ್ಲರೂ ಬಿಡುಗಡೆ ಆಗುವ ವೇಳೆ ದೇಶ ದಾಸ್ಯದ ಸಂಕೋಲೆ ಕಳಚಿಕೊಂಡಿತ್ತು. ಮುಂದೆ ಎಲ್ಲರೂ ಮದುವೆಯಾಗಿ ಸಂಸಾರಸ್ಥರಾಗಿದ್ದರೆ, ಪರಪ್ಪ ಮಾತ್ರ ಮದುವೆಯಾಗದೆ ಸೇವಾ ಕಾರ್ಯದಲ್ಲಿ ತೊಡಗಿದ್ದರು. ಊರಲ್ಲಿ ಅರಮನೆಯಂತಹ ಮನೆ ಇದ್ದರೂ ಅವರ ನೆಲೆ ಆಲದ ಮರದ ಕಟ್ಟೆಯೇ ಆಗಿತ್ತು. ಮನುಷ್ಯ ಸಂಬಂಧ ಮೀರಿದ ನಂಟು ಅದರೊಂದಿಗಿತ್ತು. ಸ್ವಾತಂತ್ರ್ಯ ಹೋರಾಟದ ರೂಪುರೇಷೆಗಳೆಲ್ಲ ಅನಾವರಣಗೊಳ್ಳುತ್ತಿದ್ದುದು ಆ ಕಟ್ಟೆಯ ಮೇಲೆಯೇ. ಕಟ್ಟೆ ಅವರಿಗೆ ಗುಡಿ ಸ್ವರೂಪದಾಗಿದ್ದರೆ, ಆಲದ ಮರ ದೇವರ ರೂಪವಾಗಿತ್ತು. ದಿನಕ್ಕೆ ಎಷ್ಟು ಸಲ ಕಟ್ಟೆ ಹತ್ತಿದರೂ ಅದಕ್ಕೆ ನಮಸ್ಕರಿಸಿಯೇ ಮೇಲೆ ಹತ್ತುವ ರೂಢಿ ಅವರದು. ಚಳವಳಿ ಕಾಲದಲ್ಲಿ ಹೋರಾಟಗಳಿಗೆ